ಮೈಸೂರು ಡಿಸ್ಟ್ರಿಕ್ಟು.

ತಾರೀಖು 5ನೇ ಫಿಬ್ರವರೀ 1887.

ಇದರಿಂದ ತಿಳಿಸುವದೇನಂದರೆ, ಮೈಸೂರು ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಗೆ ಸ್ರ್ 1887ನೇ ಇಸವಿ ಏಪ್ರೆಲ್ ಗುರ್ತೀ ತಾರೀಖು ಮೊದಲು 1888ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಶೀರಿ ಬೇಕಾದ ಆಹಾರ ವಗ್ಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೋಕ ಸರಬರಾಯಿ ಮಾಡುವ ಬಗ್ಗೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರ್‌ಟೆಂಡೆಂಟರವರು ಸ್ರ್ 1887ನೇ ಇಸವಿ ಮಾರ್ಚೀ 15ನೇ ತಾರೀಖುವರೆಗೆ ತೆಗದುಕೊಳ್ಳುವರು.

2. ಸದರೀ ಮೇಲ್ಕಂಡ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಮೈಸೂರು ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಗೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡ ತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಮೈಸೂರು ಜೈಲ್ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಪ್ರಾತಃಕಾಲ $7\frac{1}{2}$ ಘಂಟೆಗೆ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು. ಯಾವವಂದರೆ:—

ನೇಟಿವ್ ಕೂಲೀಯವರಾದ ಗಂಡಸರು	..	..	A ಕ್ಲಾಸ್*
ಡಿಟೋ ಡಿಟೋ	..	..	B ,,
ಡಿಟೋ ಡಿಟೋ	..	..	C ,,
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು ಮತ್ತು ವಿಚಾರಣೆಯಲ್ಲಿ ಇರತಕ್ಕವರು	..	..	D ,,

*ಆಹಾರ ಜಿನಸಿಗಳಲ್ಲಿ ಮುಂಸ ಸಹಾ ಶೇರಿರುವ ಸಂದರ್ಭಗಳಲ್ಲಿ, ಪ್ರತಿ ಇಸಮಿಗೂ ಸಲ್ಲುವ ಲವನಸಿನೊಳಗೆ ಎಲಬು ವಿನಾಯಿಸ ತಕ್ಕದ್ದು. ಯೂರೋಪಿಯರ್ಯಗಳು ವ ಈಸ್ಟ್ ಇಂಡಿಯರ್ಯಗಳಿಗೆ ರಾಗಿ ಸಹಿತ ಆಸಪತ್ರಿ ಪಥ್ಯದ ಆಹಾರ ಅಕ್ಕಿ ಸಹಿತ ಆಸಪತ್ರಿ ಪಥ್ಯದ ಆಹಾರ.

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್‌ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ, ಸ್ಕೇಲ್ ಪಟ್ಟೀ ಪ್ರಕಾರ ಆಸಪತ್ರಿ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದಯಂಣೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಸ್ನಾನ ಮಾಡುವ ಬಗ್ಗೆ ಶೀಗೇಕಾಯಿ, ತಮಾಂ ತಾಂಬ್ರಪಾತ್ರೆಗಳ ರಿಪೇರಿ ವ ಕಲಾಯಿ ಮಾಡುವಣ, ಪರಕೆಗಳು, ಪಾಯಖಾನೆ ಗೂಡೆ, ಮಡಿಕೆ ಸುಡುವ ಬಗ್ಗೆ ಸಾದೆ, ಹೆಣ್ಣು ಖೈದೀರ ಮಕ್ಕಳಿಗೆ ಜೇಕಾದ ಹಾಲು ರೊಟ್ಟಿ, ಸಕ್ಕರೆ ವಗ್ಗೈರೆ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡುವ ಬಟ್ಟೆ ಸಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್‌ಟೆಂಡೆಂಟರವರು ಯಾವ ದರಖಾಸ್ತುಗಳಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಪೌಳಿಸಿ ಕೊಂಡಿರುತ್ತಾರೆ ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಣಮೆಂಟ್ ಪತ್ರಗಳ ಮೂಲಕವಾದರೂ 500 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಐದು ವಾರದ ಒಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರೀ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು. ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟು ಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳ್ಗೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟುದಾರನಿಂದ ಸರಬರಾಯಿ ಮಾಡಲ್ಪಡುವ ಅಕ್ಕಿ, ರಾಗಿ ಮತ್ತು ಬೇಳೆ ಮುಂತಾದ್ದು ಮಾಡಲ್ಪಟ್ಟು ತವಡು ಇಲ್ಲದೇ ಇರಬೇಕು. ಸರಬರಾಯಿ ಮಾಡುವದಕ್ಕೆ ಮುಂಚಿತವಾಗಿಯೇ ಮೆಣಸಿನಕಾಯಿ ಹುಂಬನ್ನೂ ಹುಣಿಸೇಹಣ್ಣಿನ ನಾರು ವ ಬೀಜವನ್ನೂ ತೆಗದಿರಬೇಕು.

14. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಗಾಗಲಿ, ಕಿರದು ತರದ ಯಾವ ಪದಾರ್ಥಗಳನ್ನಾದರೂ ಕೊಟ್ಟುಲ್ಲಾಗಲಿ ಮೈಸೂರ ಜೈಲ್ ಸೂಪರ್‌ಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮಿಾರದ ಬಂದು ಜುರ್ಮಾನೆಯು ವಿಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀರ್ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡಬಹುದು.

15. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರ ನಿರ್ಣಯವೇ ಆಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು, ಖೈದಿಗಳ ವುಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈರ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಆಹಾರ ದರದ ಪಟ್ಟಿಯನ್ನೂ, ವ ಇತರ ತಪಶೀಲುಗಳನ್ನೂ, ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಪಡೆಯಬಹುದು ಹಾಲಿ ಮೈಸೂರು ಜೈಲ್‌ನಲ್ಲಿ 300 ಮಂದಿ ಖೈದೀರಿರುತ್ತಾರೆ ಈ ಸಾಲ್‌ನಲ್ಲಿ ಸುಮಾರು 350 ಮಂದಿವರಿಗೂ ಜಾಸ್ತಿಯಾಗಬಹುದು.

ಪಿ. ಹೆಚ್. ಕ್ಯಸ್ಯ, ಎಂ. ಬಿ., ಸೂ. ಮೈಸೂರ ಜೈಲ್.

ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ್.

ತಾರೀಖು 1ನೇ ಮಾರ್ಚೀ 1887.

ಫ್ರೆಂಚರಾಕ್ಸ್ ಸಬ್ ಡಿವೀರ್ಜ ಮಂಡ್ಯ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಈ ಕೆಳಗೆ ನಮೂದಾಗುವ ದಸ್ತಾವೇಜನ್ನ ಕ್ರಮವಾದ ವಾರಸ್ದಾರನಾಗಲೀ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಕಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾರರು ಮತ್ತು ಸಬ್ ರಿಜಿಸ್ಟ್ರಾರರು ದಸ್ತಾವೇಜಿನ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು 107 ——— 1884—85	ಮಂಡ್ಯದಲ್ಲಿ ಯಿರುವ ಜೈನರ ಮಣಿಯಪ್ಪನವರ ಬ್ರಹ್ಮಯ್ಯ	ಮಂಡ್ಯದ ಕಸಬಾದಲ್ಲಿರುವ ಜೈನರ ಮಾಡಗಲ್ಲು ಮರಿಯಂಣನವರ ಚಿಕ್ಕಣಪ್ಪ	18—11—84	19—11—84	ಯಿದೆ ತಾಲ್ಲೂಕು ಕೊತ್ತತ್ತಿ ಹೋಬಳಿ ಗುತ್ತಲ್ ಗ್ರಾಮದಲ್ಲಿ ನಮ್ಮ ಅತ್ತಿಗೆ ಪದ್ಮಾವತಮ್ಮನಿಂದ ನನಿಗೆ ಕ್ರಯವಾಗಿರುವ ತರೀ ಜಮೀನು ಚೌತರ ಪು ಆನೆಕೆರೆ ತೋಟದಪ್ಪನ ತೆಂಗಿನ ತೋಟಕ್ಕೆ ಪ ಶ್ಚಿಮ, ಕೆರೇ ಏರಿಗೆ ಪೂರ್ವ, ಪಸ್ತರ ಕೊಡಿಗೆ ಗ ದ್ದೆಗೆ ಪುತ್ತರ ಕೆರೆ ಏರಿಗೆ ದಕ್ಷಿಣ ಈ ಮಧ್ಯೆ ಯಿರುವ ನಂಬರ್ 945ನೇ ತರೀ ಬೀಜವರಿ 0-19-$11\frac{1}{4}$ ಕಂದಾಯ 14-5-3 ಲೋಕಲ್0-14-4 ಜುಮ್ಮಾ 15—3—7ನೆ ವುಳ್ಳದ್ದನ್ನು ಗವರ್ಮೆಂಟ್ 100 ರೂಪಾಯಿಗೆ ಕುದ್ದ ಕ್ರಯಕ್ಕೆ ಕೊಟ್ಟು ಯಿರುವದಾಗಿ.

ಬಿ. ಕೆ. ವೆಂಕಟವರದಯ್ಯಂಗಾರ್,

ರಿಜಿಸ್ಟ್ರಾರ್.